ಇ) ಮಕ್ಕಳ ಸಂಖ್ಯೆ ಜಾಸ್ತಿ ಇದ್ದು ಸ್ಥಳಾಂತರದಿಂದ ಮಕ್ಕಳಿಗೆ ತೊಂದರೆಯಾಗಿರುವುದು ಸರ್ಕಾರ ಗಮನಿಸಿದೆಯೇ;

ಈ) ಸ್ಥಳಾಂತರ ಮಾಡಿರುವ ವಸತಿ ನಿಲಯಗಳನ್ನು ಜೇವರ್ಗಿ ತಾಲ್ಲೂಕಿನಲ್ಲಿಯೇ ಮುಂದುವರಿಸಲು ಕ್ರಮ ಕೈಗೊಳ್ಳಲಾಗಿದೆ?

ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು

ಅ) ಹೌದು

ಆ) ದಾಖಲಾತಿ ಪ್ರಮಾಣ ಅತೀ ಕಡಿಮೆ ಇರುವುದರಿಂದ ಸದರಿ ವಿದ್ಯಾರ್ಥಿ ನಿಲಯಗಳನ್ನು ಉನ್ನತೀಕರಿಸಿ ಸ್ಥಳಾಂತರಿಸಿದೆ

ಸಾಕಷ್ಟು ವಿದ್ಯಾರ್ಥಿಗಳು ಇಲ್ಲದಿರುವುದರಿಂದ ಸಿಬ್ಬಂದಿಗಳಿಗೆ ವೇತನ ಮತ್ತು ಕಟ್ಟಡ ನಿರ್ವಹಣೆ, ಹಾಗೂ ಇತರೆ ವೆಚ್ಚವನ್ನು ಭರಿಸಬೇಕಾಗುತ್ತದೆ. ಆದ್ದರಿಂದ ಈ ಸೌಲಭ್ಯಗಳನ್ನು ಬೇಡಿಕೆ ಇರುವ ಹೆಚ್ಚಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಇ) ಮತ್ತು ಈ) ಮಕ್ಕಳಿಗೆ ತೊಂದರೆಯಾಗದಂತೆ ಇಲಾಖೆಯ ಹಿರಿಯ ಅಧಿಕಾರಿಗಳಿಂದ ತಪಾಸಣೆ ನಡೆಸಿ ತಾಲ್ಲೂಕಿನ ಹಿರಿಯ ಅಧಿಕಾರಿಗಳಿಂದ ತಪಾಸಣೆ ನಡೆಸಿ ತಾಲ್ಲೂಕಿನ 04 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿರುವುದು ಕಂಡು ಬಂದರೆ ಅವುಗಳನ್ನು ಮುಂದುವರೆಸುವ ಬಗ್ಗೆ ಪರಿಶೀಲಿಸಲಾಗುವುದು
(ಸಕಇ 107 ಪಕವಿ 2012)

(ಎ. ನಾರಾಯಣಸ್ವಾಮಿ)
ಸಮಾಜ ಕಲ್ಯಾಣ ಮತ್ತು ಬಂಧಿಖಾನೆ ಸಚಿವರು.

ಕರ್ನಾಟಕ ವಿಧಾನ ಸಭೆ

580

ಶ್ರೀ ವೆಂಕಟಸ್ವಾಮಿ

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿಜಯಪುರ ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಘಟಕ ನಿರ್ಮಾಣಕ್ಕೆ ಜಾಗ ಮಂಜೂರು ಮಾಲಾಗಿದೆಯೇ;

ಆ) ಹಾಗಿದ್ದಲ್ಲಿ, ಬಸ್ ಘಟಕ ನಿರ್ಮಾಣಕ್ಕೆ ತಗಲುವ ಅನುದಾನದ ಮೊತ್ತವೆಷ್ಟು; ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಗುವುದು?

ಮಾನ್ಯ ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ ಸಚಿವರು.

ಅ) ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿಜಯಪುರದಲ್ಲಿ ಬಸ್ ಘಟಕ ಸ್ಥಾಪಿಸಲು ಕಂದಾಯ ಇಲಾಖೆಯಿಂದ ಸರ್ವೇ ಸಂಖ್ಯೆ : 161 ರಲ್ಲಿ 4 ಎಕರೆ ಜಾಗವನ್ನು ಆಗಸ್ಟ್ 2011 ರಲ್ಲಿ ಸಾರಿಗೆ ನಿಗಮದ ವಶಕ್ಕೆ ಪಡೆಯಲಾಗಿರುತ್ತದೆ.

ಆ) ಈ ಬಗ್ಗೆ ಮುಂದಿನ ದಿನಗಳಲ್ಲಿ, ಸಾರಿಗೆ ಅವಶ್ಯಕತೆ ಹಾಗೂ ಸಂಸ್ಥೆಯ ಆಂತರಿಕ ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲು ಪರಿಶೀಲಿಸಲಾಗುವುದು

ಸಾರಿಇ 74 ಸಾಸಂಪ್ರ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು
ಸಾರಿಗೆ ಮತ್ತು ಗೃಹ

ಕರ್ನಾಟಕ ವಿಧಾನ ಸಭೆ

592

ಅ) ಸಕಲೇಶಪುರ ಬಸ್ ಡಿಪೋ ಚಿಕ್ಕಮಗಳೂರು ಸಾರಿಗೆ ವಿಭಾಗಕ್ಕೆ ಸೇರಿರುವುದರಿಂದ ಪ್ರಯಾಣಿಕರಿಗೆ ಮತ್ತು ಆಡಳಿತ ದೃಷ್ಟಿಯಿಂದ ತೊಂದರೆಯಾಗುತ್ತಿರುವುದು ನಿಜವೇ;

ಆ) ಅಂತೆಯೇ ಹಾಸನ ವಿಭಾಗಕ್ಕೆ ವರ್ಗಾಯಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಸಕಲೇಶಪುರ ಡಿಪೋದಲ್ಲಿ ತುಂಬಾ ಹಳೆಯ ಬಸ್‌ಗಳಿದ್ದು, ಮಾರ್ಗ ಮಧ್ಯದಲ್ಲಿ ಕೆಟ್ಟು ನಿಲ್ಲುವುದರಿಂದ ಸಾರ್ವಜನಿಕರಿಗೆ ಆಗುವ ತೊಂದರೆಯ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

ಈ) ಮಲೆನಾಡು ಭಾಗಗಳಲ್ಲಿ ಹೊಸ ಬಸ್‌ಗಳನ್ನು ಸಂಚರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಮಲೆನಾಡು ಭಾಗಗಳಲ್ಲಿ ಆನೆಗಳ ಹಾವಳಿ ಹೆಚ್ಚಾಗಿದ್ದು, ಸಾರಿಗೆ ನಿಗಮವು ಆದಾಯ ನಿರೀಕ್ಷಿಸದೇ ಸಂಚಾರ ವ್ಯವಸ್ಥೆ ಕೈಗೊಳ್ಳುವುದೇ?